4 ಶ್ರೀ ವಸಂತಬಂಗೇರ.ಕೆ. (ಬೆಳ್ತಂಗಡಿ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಒಟ್ಟು ವಿದ್ಯುತ್ ಬಳಕೆದಾರರಲ್ಲಿ ಎಷ್ಟು ಮಂದಿ ಸೋಲಾರ್ ದೀಪವನ್ನು ಉಪಯೋಗಿಸುತ್ತಿದ್ದಾರೆ;

ಆ) 2008–09ರ ಸಾಲಿನಲ್ಲಿ ಸೋಲಾರ್ ದೀಪವನ್ನು ಉಪಯೋಗಿಸುತ್ತಿರುವ ವಿದ್ಯುತ್ ಬಳಕೆದಾರರಿಗೆ ವಿದ್ಯುತ್ ಶುಲ್ಕದಲ್ಲಿ ಎಷ್ಟು ಮೊತ್ತದ ರಿಯಾಯಿತಿಯನ್ನು ನೀಡಲಾಗಿದೆ?

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) :

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಒಟ್ಟು ಬಳಕೆದಾರರಲ್ಲಿ 446 ಮಂದಿ ಸೋಲಾರ್ ದೀಪವನ್ನು ಉಪಯೋಗಿಸುತ್ತಿದ್ದಾರೆ.

ಆ) 2008–09ರ ಸಾಲಿನಲ್ಲಿ ಸೋಲಾರ್ ದೀಪವನ್ನು ಉಪಯೋಗಿಸುತ್ತಿರುವ ವಿದ್ಯುತ್ ಬಳಕೆದಾರರಿಗೆ ವಿದ್ಯುತ್ ಶುಲ್ಕದಲ್ಲಿ ಯಾವ ರಿಯಾಯಿತಿ ಇರುವುದಿಲ್ಲ.

624 ಶ್ರೀ ಶ್ರೀನಿವಾಸ್ (ವಾಸು) ಎಸ್.ಆರ್. (ಗುಬ್ಬಿ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಗುಬ್ಬಿ ನಗರದಲ್ಲಿರುವ ವಿವೇಕಾನಂದ ವಿದ್ಯಾಪೀಠ ಶಾಲೆಯ ಕಟ್ಟಡದ ಮೇಲೆ ಹೈಟೆನ್ಷನ್‌ಲೈನ್ ಹಾದುಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅಲ್ಲಿನ ವಿದ್ಯಾರ್ಥಿಗಳ ಪಾಠಪ್ರವಚನಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಹೈಟೆನ್ಷನ್ ಲೈನ್‌ನನ್ನು ಸ್ಥಳಾಂತರಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಇದನ್ನು ಎಂದು ಸ್ಥಳಾಂತರಿಸಲಾಗುವುದು?

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) :

ಅ), ಆ) ಮತ್ತು ಇ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಸಂಬಂಧಿಸಿದ 220 ಕೆ.ವಿ.ಹೈಟೆನ್ಷನ್‌ಲೈನ್ 1965ನೇ ಇಸವಿಯಿಂದ ಕಾರ್ಯನಿರ್ವಹಿಸುತ್ತಿದೆ.

ಆನಂತರದಲ್ಲಿ ಸದರೀ 220 ಕೆ.ವಿ. ಹೈಟೆನ್ಷನ್‌ಲೈನ್ ಕೆಳಗೆ ವಿವೇಕಾನಂದ ವಿದ್ಯಾಪೀಠ ಶಾಲೆಯ ಕಟ್ಟಡವನ್ನು ನಿರ್ಮಾಣ ಮಾಡಲಾಗಿರುತ್ತದೆ. ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯಕ್ಕೆ ವಿವೇಕಾನಂದ ವಿದ್ಯಾಪೀಠ ಸಂಸ್ಥೆಯು ಮೇಲ್ಮನವಿ ಸಲ್ಲಿಸಿದ್ದು, (ಮೇಲ್ಮನವಿ ಸಂಖ್ಯೆ 24333/2005) ಈ ಮೇಲ್ಮನವಿಯು ದಿನಾಂಕ: 5–01–2009 ರಂದು ಇತ್ಯರ್ಥಗೊಂಡಿರುತ್ತದೆ. ವಿವೇಕಾನಂದ ವಿದ್ಯಾಪೀಠ ಸಂಸ್ಥೆಯು ರಾಜ್ಯ ಉಚ್ಚ ನ್ಯಾಯಾಲಯಕ್ಕೆ ಈ ಕಟ್ಟಡವನ್ನು ತಾವು ತೆರವುಗೊಳಿಸಿರುವುದಾಗಿ ಮುಚ್ಚಳಿಕೆಯನ್ನು ನೀಡಿರುತ್ತಾರೆ. ಈ ಮುಚ್ಚಳಿಕೆಯ ಆಧಾರದ ಮೇಲೆ ರಾಜ್ಯ ಉಚ್ಚ ನ್ಯಾಯಾಲಯವು ಮೇಲ್ಮನವಿಯನ್ನು ಇತ್ಯರ್ಥಪಡಿಸಿರುತ್ತದೆ. ಮೇಲ್ಕಂಡ ಹೈ ಟೆನ್ಷನ್ ಲೈನ್ 1965ನೇ ಇಸವಿಯಿಂದಲೇ ಕಾರ್ಯನಿರ್ವಹಿಸುತ್ತಿದ್ದು, ಆನಂತರದಲ್ಲಿ ಸದರಿ ಕಟ್ಟಡವು ನಿರ್ಮಾಣಗೊಂಡಿರುವುದರಿಂದ ಮೇಲ್ಕಂಡ 220 ಕೆ.ವಿ. ಹೈಟೆನ್ಷನ್ ಲೈನನ್ನು ಸ್ಥಳಾಂತರಿಸುವ ಪ್ರಶ್ನೆಯ ಉದ್ಭವಿಸುವುದಿಲ್ಲ.

830 ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ವ್ಯಾಪ್ತಿಯ ಕೇಂದ್ರ ನೆರವಿನ ಯೋಜನೆಗಳ ಅನುಷ್ಠಾನದ ವಿವರಗಳೇನು;

ಆ) ಕಳೆದ ಎರಡು ವರ್ಷಗಳಲ್ಲಿ ಕೇಂದ್ರ ನೆರವಿನ ಯೋಜನೆಗಳ ಮೂಲಕ ರಾಜ್ಯಕ್ಕೆ ಮಂಜೂರಾದ ಹಣದ ಮೊತ್ತವೆಷ್ಟು; ಅನುದಾನದ ಪೂರ್ಣ ಬಳಕೆಯನ್ನು ಮಾಡಲಾಗಿದೆಯೇ;

ಇ) ಉದ್ಯೋಗ ಖಾತರಿ ಯೋಜನೆಗಾಗಿ ವ್ಯಯ ಮಾಡಿದ್ದ ಹಣ ಮತ್ತು ಅನುಷ್ಠಾನದ ವಿವರಗಳೇನು; ಸದರಿ ಯೋಜನೆಯನ್ನು ಇನ್ನೂ ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) :

ಅ) ಮಾಹಿತಿಯನ್ನು ಅನುಬಂಧ–1ರಲ್ಲಿ ನೀಡಲಾಗಿದೆ